ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ಸೂರ್ಯೋದಯಕ್ಕೂ ಸೂರ್ಯಾಸ್ತಕ್ಕೂ ಏನು ವ್ಯತ್ಯಾಸ?



ಉದಯ ನಿರೀಕ್ಷೆಯ ಗರ್ಭ; ಅಸ್ತಮ ನಿರೀಕ್ಷೆಯ ಗರ್ಭಪಾತ.

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ
ಸಮಸ್ಯೆಗಳೇ ಇಲ್ಲದ ಸಂಸಾರ ಯಾವುದು?
ವರ್ಕ್ ಫ್ರಂ ಹೋಂ ಮಗ, ಕಾಲ ಬಳಿಯೇ ಲಕ್ಷ್ಮಿ ಇರುವ ವಿಷ್ಣುವಿನದು.

ಜಿ.ಸಿ. ಸಂಗನಬಸಪ್ಪ, ದಾವಣಗೆರೆ
'ನೀವು ನಮ್ಮನಗಲಿ 5 ವರ್ಷ. ಸದಾ ನಿಮ್ಮ ಹೆಸರಲ್ಲಿ, ನೀವು ಹಾಕಿದ ದಾರೀಲಿ ನಡೆವ' ಅಂತ ಪತ್ರಿಕೇಲಿ ಹಾಕಿಸೋದು ಯಾರಿಗೋಸ್ಕರ?
'ಇನ್ನೂ ಕಂಪನಿ ನಡೀತಿದೆ. ಹೂಡಿಕೆದಾರರು ನೆಮ್ಮದಿಯಿಂದಿರಿ' ಎಂದು, ಹಾಗಿಲ್ಲದಿದ್ದರೂ, ಸೂಚಿಸಲು.

ಎನ್.ವಿ. ಭಟ್, ಶಿವಮೊಗ್ಗ
ಮಹಿಳೆಯರಿಗೆ ಸೌಂದರ್ಯಪ್ರಜ್ಞೆ ಇರುವಷ್ಟು ಆರೋಗ್ಯಪ್ರಜ್ಞೆ ಏಕೆ ಇರುವುದಿಲ್ಲ?



ಆರೋಗ್ಯ ಕೊಂಚವೇ ಏರುಪೇರಾದರೂ ಎಚ್ಚರಿಸಲು ಆಂತರಿಕ ಕನ್ನಡಿ ಇಲ್ಲವಲ್ಲ.

ಉಷಾಲಕ್ಷ್ಮಿ ಅರವಿಂದ ಹೊಳ್ಳ, ಬೆಂಗಳೂರು
ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ ಏಕೆ ರಾಮ್?
ತೋರಿಕೆಯ ಜಗದಲ್ಲಿ ಹಿಟ್ಟು ಗಿಟ್ಟಲು ಗಿಲೀಟು ಮುಖ್ಯ.

ಸೀಮಂತಿನಿ ದೇಸಾಯಿ, ಬೆಂಗಳೂರು
ನಟರಂಗ ಮತ್ತು ರಾಜಕಾರಣದಲ್ಲಿ 'ಸಾತ್ ಖೂನ್ ಮಾಫ್'. ಏನಂತೀರಿ ರಾಂ?
ಹಣದ ಝಣಕ್ಕೆ 'ಕಾನೂನ್ ಕಾ ಕಾನ್' ಊನ ಆದರೆ ಮಾತ್ರ.

ಪಿ.ಜೆ. ರಾಘವೇಂದ್ರ, ಮೈಸೂರು
ಸಿನಿಮಾ ರಿಲೀಸಿಗಾಗಿ ಕಾಯುತ್ತಿದ್ದವರು ಸಿನಿಮಾ ನಟನ ರಿಲೀಸಿಗಾಗಿ ಕಾಯುವಂತಾಯಿತಲ್ಲ?
ಸರಿಯಾದ ಸ್ಕ್ರಿಪ್ಟ್ ರೈಟರ್ ಸಿಗದಿರುವುದೇ ಇದಕ್ಕೆಲ್ಲ ಕಾರಣವಂತೆ.

ಜಯತೀರ್ಥ ಶ್ರೀಪತಿ, ಹುಬ್ಬಳ್ಳಿ
ಅವಳ ಬಗ್ಗೆ ತಿಳಿಯದೆ ವರಿಸಿದೆ. ರಕ್ಷಾಕವಚ ಯಾವುದು?
ಅದೇ ಮುಗ್ಧತೆಯೇ. ಅನಗತ್ಯ ವಿಷಯಗಳು ಮನಸ್ಸಿಗೆ ಹೊರೆ.

ರಮೇಶ ಜವಳಗಿ, ಬನಹಟ್ಟಿ
ಹುಟ್ಟು ಮತ್ತು ಸಾವಿನ ಮನೆಗೆ ಹೋಗಿ ಬಂದಾಗ ಜಳಕ ಮಾಡುವುದೇಕೆ?
ಎತ್ತಿಕೊಂಡಾಗ ಏನೋ ಮೆತ್ತಿಕೊಂಡಿತೆಂಬ ಶಂಕೆಯಂತೆ.

ಸುಶೀಲಾ ಎಸ್. ಪಾಟೀಲ, ಸಂಕೇಶ್ವರ
ಬೈಗುಳದಲ್ಲಿ ಕತ್ತೆ ಮತ್ತು ಕೋಣವನ್ನಷ್ಟೇ ಬಳಸುತ್ತಾರೆ. ಏಕೆ?
ಪ್ರಾಸದಲ್ಲಿ ಅತ್ತೆಗೂ, ಗುಣದಲ್ಲಿ ರಮಣನಿಗೂ ಹೋಲಿಕೆ ಇರುವುದರಿಂದ.

ಎಂ.ಜಿ. ಉಮಾ, ಬಳ್ಳಾರಿ
ಮನುಷ್ಯನ ಪಾಪಗಳನ್ನು ತೊಳೆಯುವ ಸೋಪು ಇನ್ನೂ ಏಕೆ ಬಂದಿಲ್ಲ?
ಇದೆಯಲ್ಲ; ತೀರ್ಥಕ್ಷೇತ್ರದ ಜಲವೆಲ್ಲ ಲಿಕ್ವಿಡ್ ಸೋಪೇ.

ಜೀವಿ, ಗೊಂಡೇದಹಳ್ಳಿ
ಬೌದ್ಧಿಕ ಶ್ರೀಮಂತಿಕೆಯ ಪ್ರದರ್ಶನವು ಆರ್ಥಿಕ ಶ್ರೀಮಂತಿಕೆಯ ಪ್ರದರ್ಶನಕ್ಕಿಂತ ಅಪಾಯಕಾರಿಯಲ್ಲವೆ?
ಕೆಲವು ಜಾಣರಂತೆ ಪ್ರದರ್ಶಿಸಿದರೆ ಅಪಾಯವಿಲ್ಲ – ಯಾರಿಗೂ ಅರ್ಥವೇ ಆಗದಲ್ಲ!

ವಿ. ಹೇಮಂತಕುಮಾರ್, ಬೆಂಗಳೂರು
ಕೊರಳಿನಲ್ಲಿರುವ ಸರಕ್ಕೂ, ಕೊಳಲಿನಲ್ಲಿರುವ ಸ್ವರಕ್ಕೂ ವ್ಯತ್ಯಾಸವೇನು?
ಮಣಿಯ ರಂಧ್ರಗಳನ್ನು ಪೋಣಿಸಿದರೆ ಸರ; ಕೊಳಲ ರಂಧ್ರಗಳನ್ನು ಪೋಷಿಸಿದರೆ ಸ್ವರ.

## ಬಹುಮಾನಿತ ಪ್ರಶ್ನೆ

ನರಸಿಂಹ ಪೈ, ಕಾಸರಕೋಡ
ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಪಾಸಾಗಲು ತಮ್ಮ ಪ್ರಯತ್ನದ ನಂತರವೇ ದೇವರನ್ನು ಪ್ರಾರ್ಥಿಸಬೇಕೇಕೆ?
ತಮ್ಮ ಪ್ರಯತ್ನದ ನಂತರ ಅವರಿಗೆ 'ದೇವ್ರೇ ಗತಿ' ಎಂದು ಗೊತ್ತಾಗುವುದರಿಂದ.

ಸುಬ್ರಹ್ಮಣ್ಣ ಬಿ.ಎಸ್.
ಬಾಳ ಸಂಗಾತಿ ಈಗ ಬೋಳು ಸಂಗಾತಿ ಆಗಿದ್ದಾನಂತೆ. ಕಾರಣವೇನಿರಬಹುದು?
ಕ್ಲೇಶವರ್ಧಿನಿಯ ಪ್ರಭಾವವಂತೆ.

ಅನಸೂಯಾ ಟಿ, ಕೇದಿಗೆಮನೆ
ಹಣೆಬರಹಕ್ಕೆ ಹೊಣೆ ಯಾರು ರಾಮಾ?
ಹಣಿಯಲಾಗದ ಮನಸ್ಸು.

ಮಂಡಿ ಕುಮಾರ್, ಬೆಂಗಳೂರು
ಹಳಿ ತಪ್ಪಿದ ರೈಲಿಗೂ, ಬಿರುಕುಗೊಂಡ ಸಂಸಾರಕ್ಕೂ ವ್ಯತ್ಯಾಸವೇನು?



ರೈಲನ್ನು ಕೆಲವೇ ಗಂಟೆಗಳಲ್ಲಿ ಮತ್ತೆ ಟ್ರ್ಯಾಕಿಗೆ ತರಬಹುದು.

ಭಾರತೀ ಗಂಗಾಧರ್, ಬೆಂಗಳೂರು
ಕೆಟ್ಟದ್ದನ್ನು ಮಾಡಿದವರೇ ಹೆಚ್ಚು ಜ್ಞಾಪಕ ಇರುವುದೇಕೆ?
ಗಬ್ಬುವಾಸನೆ ಹರಡುವಷ್ಟು ದೂರಕ್ಕೆ ಸುವಾಸನೆ ಹರಡದು. ಇದೂ ಹಾಗೇ.

ಭಾನುಮತಿ ಭೋಜರಾಜ್, ಮಂಗಳೂರು
ಆಧುನಿಕ ಯುಗದಲ್ಲಿ ಅಪರಾಧಗಳ ಸಂಖ್ಯೆ ಜಾಸ್ತಿ ಆಗುತ್ತಿದೆಯಲ್ಲ, ಕಾರಣ?
ಮೂರೂವರೆ ಯುಗಗಳ ಅಪರಾಧ ವೈಖರಿಯ ವಿಸ್ತೃತ ಅಧ್ಯಯನ, ಅನುಕರಣ, ವಿಸ್ತರಣ!

ಕೆ.ವಿ. ಗೋವಿಂದಾಚಾರಿ, ಮೈಸೂರು
ಶಿವ ಕೈಲಾಸವಾಸಿ. ವಿಷ್ಣು ವೈಕುಂಠವಾಸಿ. ಬ್ರಹ್ಮ?
ಹೆಸರುವಾಸಿ.

■ ರಾಮ್